ಬೀಜಗಳ ಸಹಕಾರ ನಿಮಕ್ಕೆ ಮಾರಾಟ ಮಾಡಿದ ನಂತರ ಅದರಲ್ಲಿ ನಿರ್ವಹಿಸುತ್ತಿದ್ದ ನೌಕರರನ್ನು ಕೃಷಿ ಇಲಾಖೆಗೆ ತೆಗೆದುಕೊಳ್ಳಲು ದಿನಾಂಕ: 19–9–1992ರಂದು ನಡೆದ ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಂಡಿರುವುದು ನಿಜವೇ;

ಆ. ಹಾಗಿದ್ದಲ್ಲಿ ಸದರಿ ನೌಕರರ ಬಗ್ಗೆ ಸರ್ಕಾರದವರು ಈವರೆಗೆ ಕೈಗೊಳ್ಳಲಾಗಿರುವ ಕ್ರಮಗಳೇನು;

ಇ. ಸದರಿ ನೌಕರರಿಗೆ 2 ವರ್ಷಗಳಿಗಿಂತಲೂ ಮೇಲ್ಪಟ್ಟು ಸಂಬಳವಿಲ್ಲದೆ ಹೆಚ್ಚಿನ ರೀತಿಯ ತೊಂದರೆಗೊಳಗಾಗಿರುವುದರಿಂದ ಈಗಾಗಲೇ ಆಗಿರುವ ತೀರ್ಮಾನದ ಬಗ್ಗೆ ಸರ್ಕಾರದವರು ಕೂಡಲೇ ಕ್ರಮಗಳನ್ನು ಕೈಗೊಳ್ಳುವರೇ ?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ಖಾತೆ ರಾಜ್ಯ ಸಚಿವರು):–

ಆ. ಹೌದು.

ಆ. ಈ ನೌಕರರನ್ನು ಕೃಷಿ ಇಲಾಖೆ ತೆಗೆದುಕೊಳ್ಳುವ ಸಾಧ್ಯತೆಯ ಬಗ್ಗೆ ಪರಿಶೀಲಿಸಿ ವಿಶೇಷ ನಿಯಮಗಳನ್ನು ಮಾಡಬೇಕಿದ್ದು ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಇ. ಈ ನೌಕರರಿಗೆ ಬಾಕಿ ಇರುವ ಸಂಬಳವನ್ನು ಕೃಷಿ ಇಲಾಖೆಯ ವೆಚ್ಚದ ಉಳಿತಾಯದಲ್ಲಿ ನೀಡಬೇಕಾಗಿದ್ದು ಇದರ ಬಗ್ಗೆ ಈಗಾಗಲೇ ಕ್ರಮ ಕೈಗೊಂಡು ಅತಿ ಶೀಘ್ರದಲ್ಲೇ ಬಾಕಿ ಇರುವ ಸಂಬಳವನ್ನು ಪಾವತಿ ಮಾಡಲಾಗುವುದು.

ಹಾಸ್ಟೆಲ್ ಸೌಲಭ್ಯದ ಬಗ್ಗೆ

1465: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಾಗಡಿ ಟೌನ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ., ಎಸ್.ಟಿ. ಹಿಂದುಳಿದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿದ್ಯಾರ್ಥಿನಿಲಯದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಯಾವಾಗ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗುವುದು;

ಇ. ಎಷ್ಟು ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡಲಾಗುವುದು;

ಈ. ಬರುವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಸರ್ಕಾರ ತೀವ್ರವಾಗಿ ಯೋಚಿಸುವುದೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ಹೌದು.

ಆ. ಸಂಬಂಧಪಟ್ಟ ಜಿಲ್ಲಾಪರಿಷತ್‌ನಿಂದ ಪ್ರಸ್ತಾವನೆ ಬಂದ ಕೂಡಲೇ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವ ಸಾಧ್ಯತೆಯ ಬಗ್ಗೆ ಸರ್ಕಾರವು ಪರಿಗಣಿಸುತ್ತದೆ.

ಇ. ಜಿಲ್ಲಾಪರಿಷತ್ತಿನ ಪ್ರಸ್ತಾವನೆಯ ಅನುಗುಣವಾಗಿ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡಲಾಗುವುದು.

ಈ. ಅ ಮತ್ತು ಇ ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಇದು ಸಧ್ಯಕ್ಕೆ ಉದ್ಭವಿಸುವುದಿಲ್ಲ.